ಕಲಘಟಗಿ ತಾಲ್ಲೂಕಿಗೆ ಪ್ರತ್ಯೇಕ ಕೃಷಿ ಉತ್ಪನ್ನಗಳ ಮಾರಾಟ ಸಮಿತಿ ಪ್ರಾರಂಭಿಸುವ ಬಗ್ಗೆ

೯೩೮. ಶ್ರೀ ಪಿ. ಸಿ. ಸಿದ್ದನಗೌಡ್ರ (ಕಲಘಟಗಿ).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಲಘಟಗಿ ತಾಲ್ಲೂಕಿಗೆ ಪ್ರತ್ಯೇಕ ಎ.ಪಿ.ಎಂ.ಸಿ.ಯನ್ನು ತೆರೆಯುವ ವಿಚಾರವು ಸರ್ಕಾರದ ಮುಂದಿದೆಯೇ ?

ಆ) ಹಾಗಿದ್ದಲ್ಲಿ ಈ ಕಾರ್ಯಕ್ರಮವು ಈಗ ಯಾವ ಹಂತದಲ್ಲಿದೆ.

ಡಾ॥ ಹೆಚ್. ಆರ್. ರಾಜಂ (ಸಹಕಾರ ರಾಜ್ಯ ಮಂತ್ರಿಗಳು).—

ಅ) ಹೌದು.

ವಿಷಯವು ಪರಿಶೀಲನೆಯಲ್ಲಿದೆ.

ಸಂಭವಿಸಿರುವ ದರೋಡೆ ಪ್ರಕರಣಗಳು

೯೪೦. ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷದಿಂದ ಮೇ ೧೯೯೦ರವರೆಗೆ ಎಷ್ಟು ದರೋಡೆ ಪ್ರಕರಣಗಳು ಉಂಟಾಗಿವೆ,

ಆ) ಇವುಗಳ ಪೈಕಿ ಎಷ್ಟು ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ,

ಇ) ಈ ಪ್ರಕರಣಗಳಲ್ಲಿ ಸಾರ್ವಜನಿಕರು ಕಳೆದುಕೊಂಡಿರುವ ಹಣದ ಮೌಲ್ಯವೆಷ್ಟು,

ಈ) ಈ ದರೋಡೆ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಯವರು).—

	೧೯೮೯	೧೯೯೦ (೧-೫-೧೯೯೦ರವರೆಗೆ)
ಅ)	೨೨೮	೧೨೦
ಆ)	೯೭	೩೬

ಇ) ರೂ. ೪೬,೧೭,೪೨೬-೮೦ ೨೮,೪೬,೧೪೬-೫೦

ಈ) ಈ ದರೋಡೆಗಳನ್ನು ತಡೆಗಟ್ಟಲು ಸತತ ಪ್ರಯತ್ನಗಳನ್ನು ಮಾಡಲಾಗುತಿದ್ದು, ಅವುಗಳು ಈ ಕೆಳಕಂಡಂತಿವೆ.—

೧ ನಗರಗಳ ಹೊರವಲಯಗಳಲ್ಲಿ ಹಾಗೂ ದರೋಡೆ ಹೆಚ್ಚಾಗಿ ವರದಿಯಾಗಿರುವ ಪ್ರದೇಶಗಳ ಜನರಿಗೆ ಗನ್ ಲೈಸನ್ಸ್‌ಗಳನ್ನು ಧಾರಳವಾಗಿ ಕೊಡಲು ನಿರ್ದಿಷ್ಟವಾದ ಸೂಚನೆಗಳನ್ನು ನೀಡಲಾಗಿದೆ.

೨ ದರೋಡೆಗಳನ್ನು ಪತ್ತೆಹಚ್ಚಲು ವಿಶೇಷ ದಳಗಳನ್ನು ರಚಿಸಲಾಗಿದೆ.

೩ ಯುವಕ ಸಂಘಗಳ ಹೆಚ್ ಎ.ಎಂ.ಸಂಘಗಳ ಮತ್ತು ಸಾರ್ವಜನಿಕ ನಾಗರೀಕ ಸಂಸ್ಥೆಗಳ ಸಹಾಯವನ್ನು, ಗಸ್ತನ್ನು ತೀವ್ರಗೊಳಿಸಲು ಪಡೆಯಲಾಗಿದೆ.

೪ ಉತ್ತಮ ಸಂಪರ್ಕ ನಿಮಿತ್ತ ನಿಸ್ತಂತು ಸಲಕರಣೆಗಳನ್ನು ಮುಖ್ಯ ಸ್ಥಳಗಳಲ್ಲಿ ಅಳವಡಿಸಲಾಗಿದೆ.

೫ ಪೋಲೀಸ್ ಸಿಬ್ಬಂದಿಯ ಚಲನ ವಲನಗಳನ್ನು ಹೆಚ್ಚಿನವಾಹನ ಸೌಕರ್ಯ ಒದಗಿಸಿ ಹೆಚ್ಚಿಸಲಾಗಿದೆ. ಸ್ಥಳೀಯ ಅಪರಾಧಿಗಳು ಹಾಗೂ ಅಂತರ ರಾಜ್ಯ ಅಪರಾಧಿಗಳ ಚಲನವಲನಗಳ ಮೇಲೆ ತೀವ್ರ ನಿಗಾ ಇಡಲಾಗಿದೆ. ಈ ಉದ್ದೇಶಕ್ಕಾಗಿ ಸಿ.ಓ.ಡಿ.ಯಲ್ಲಿ ಈಗಾಗಲೇ ಎರಡು ದರೋಡೆ ಪ್ರತಿಬಂಧಕ ದಳಗಳನ್ನು ಸ್ಥಾಪಿತಲಾಗಿದೆ. ನೆರೆ ರಾಜ್ಯಗಳ ಪೋಲೀಸ್ ಅಧಿಕಾರಿಗಳ ನಡುವೆ "ಹಲವು ಗಡಿ ಸಭೆಗಳನ್ನು" ಅಪರಾಧಿಗಳ ಚಟುವಟಿಕೆಗಳ ಬಗ್ಗೆ ತಿಳುವಳಿಕೆ ಪಡೆಯಲು ನಡೆಸಲಾಗುತ್ತಿದೆ.